ಸ್ಥಾಪನೆ : 2000

# 26ನೇ ವಾರ್ಷಿಕ ವರದಿ

## 2025-26 ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ಆಹ್ವಾನ ಪತ್ರಿಕೆ

**ಸ್ಥಳ**

**ಸೈಂಟ್ ಜಾನ್ಸ್ ಆಡಿಟೋರಿಯಂ**

ಮಹಾಯೋಗಿ ವೇಮನ ರಸ್ತೆ

ಬಿ.ಡಿ.ಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ

ಬೆಂಗಳೂರು - 560 034

**Venue**

**St. John's Auditorium**

Mahayogi Vemana Road

Opp. BDA Complex, Koramangala

Bengaluru - 560 034

Date : 26-07-2026 Sunday 10.30 am

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

CHARTERED SAHAKARI BANK NIYAMITHA

No.1, 1st Main, 1st Block, Koramangala, Bengaluru - 560034

Ph: 080 2552 6266/ 2552 6288 Fax: 080 2552 6299 **Website: www.csbank.in**

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ಆಡಳಿತ ಮಂಡಳಿಯ ಸದಸ್ಯರು



ಎಂ. ಮುನಿರೆಡ್ಡಿ
ಅಧ್ಯಕ್ಷರು



ನಾರಾಯಣ ಎಸ್. ಭಟ್
ಉಪಾಧ್ಯಕ್ಷರು



ಪಿ. ವಿ. ವೆಂಕಟೇಶ ಅಯ್ಯರ್
ನಿರ್ದೇಶಕರು



ಜೆ. ನಾಗೇಶ್ವರ ರಾವ್
ನಿರ್ದೇಶಕರು



ಕೆ. ರವೀಂದ್ರ
ನಿರ್ದೇಶಕರು



ಜಿ. ಎನ್. ಮುನಿವೆಂಕಟಪ್ಪ
ನಿರ್ದೇಶಕರು



ಗುರುಮೂರ್ತಿ ರೆಡ್ಡಿ
ನಿರ್ದೇಶಕರು



ಎಂ. ಮುರಳಿಧರ್
ನಿರ್ದೇಶಕರು



ಡಿ. ಪೃಥ್ವಿರಾಜ್
ನಿರ್ದೇಶಕರು



ಗೋವಿಂದಪ್ಪ ಕೆ.ಜಿ.
ನಿರ್ದೇಶಕರು



ನರಸಿಂಹ ಮೂರ್ತಿ ಎ. ಎಂ
ನಿರ್ದೇಶಕರು



ಕಿಶೋರ್ ಕುಮಾರ್ ಎಸ್ . ಆರ್.
ನಿರ್ದೇಶಕರು



ಪಿ. ವರಲಕ್ಷ್ಮಿ
ನಿರ್ದೇಶಕರು



ಉಮಾದೇವಿ ಕೆ
ನಿರ್ದೇಶಕರು



ಅಶೋಕ್ ಎಂ.ಡಿ.
ನಿರ್ದೇಶಕರು

ಪ್ರಾರಂಭಿಕ ಅಧ್ಯಕ್ಷರು

## ವ್ಯವಸ್ಥಾಪನಾ ಮಂಡಳಿ (Board of Management) ಸದಸ್ಯರು



ಎಂ. ನಾಗರಾಜ



ಡಾ॥ ಮುನಿರೆಡ್ಡಿ ಆರ್



ಭಾಸ್ಕರ್ ಕೃಷ್ಣ



ಯೋಗೇಶ್ ವಿ. ಕೃಷ್ಣ



ನರಸಿಂಹನ್ ಕೆ

# PERFORMANCE FOR THE YEAR 2025-26

## EXPENDITURE




## INCOME










**DEPOSIT & ADVANCES GROWTH CHART (Rupees in Crores)**

| Year | 2022 | 2023 | 2024 | 2025 | 2026 |
|---|---|---|---|---|---|
| Deposits | 232.36 | 271.57 | 305.96 | 302.39 | 327.81 |
| Advances | 141.81 | 122.33 | 128.93 | 143.04 | 147.67 |

**INCOME GROWTH CHART (Rupees in Crores)**

| Year | 2022 | 2023 | 2024 | 2025 | 2026 |
|---|---|---|---|---|---|
| Income | 27.47 | 28.35 | 29.97 | 32.04 | 33.54 |
| Expenditure | 20.57 | 20.08 | 21.22 | 22.69 | 24.89 |
| Net Profit | 6.90 | 8.27 | 8.75 | 9.35 | 8.65 |

## ಬ್ಯಾಂಕಿನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ



## SPECIAL FEATURES

- ದಿನಾಂಕ 30-12-2022 ರಂದು ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯವರು ನಮ್ಮ ಬ್ಯಾಂಕ್‌ನ್ನು "ಉತ್ತಮ ಸಹಕಾರಿ ಬ್ಯಾಂಕ್ " (Best Co-Operative Bank ) ಎಂದು ಗುರುತಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿರುತ್ತಾರೆ
- Deposits upto Rs. 5.00 lakh are covered with insurance from Deposit Insurance and Credit Guarantee Corporation.
- Safe Deposit Locker facility is available
- RTGS & NEFT facility are available and our Bank's IFSC code is : **YESB0CSB001**
- We are providing ATM Rupay Debit cards, Mobile banking, SMS Alert and UPI (Google Pay, Phonepe, PAYTM ) Facility

## RATE OF INTEREST ON DEPOSITS

| Period | General Public | Senior Citizen |
|---|---|---|
| 31 Days to 90 Days | 4.00% | 4.00% |
| 91Days to 179 Days | 4.50% | 4.50% |
| 6 Months to 11 Months | 5.75% | 5.75% |
| 12 Months to 24 Months | 6.75% | 7.25% |
| 25 Months to 120 Months | 6.50% | 7.00% |

## INTEREST RATES ON LOANS

| Type of Loan | Interest Rate |
|---|---|
| Housing Loan | 7.75% - 8.25% |
| Vehicle Loan | 8.25% - 8.75% |
| Education Loan (Under Mortgage) | 8.50% - 9.00% |
| Mortgage Loan | 10.00% |
| Overdraft | 10.25% |

**Business Hours :**

| Koramangala Branch | Dommasandra Branch | H.S.R Layout Branch |
|---|---|---|
| Monday to Saturday | Monday to Saturday | Monday to Saturday |
| 9.30 a.m. to 5.30 p.m. | 9.30 a.m. to 5.00 p.m. | 9.30 a.m. to 5.30 p.m. |

**Holiday : Sunday, Second and Fourth Saturday**

ಸ್ಥಾಪನೆ : **23-06-2000**

ದೂರವಾಣಿ : 2552 6266 / 2552 6288

**RBI Licence No. UBD/KAN/0010P Dated 14-06-2000**

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

# CHARTERED SAHAKARI BANK NIYAMITHA

ನಂ.1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034

## 26 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೇ,

ನಮ್ಮ ಬ್ಯಾಂಕಿನ 26ನೇ ವಾರ್ಷಿಕ ಅಂದರೆ 2025 - 26ರ ಸಾಲಿನ ಸರ್ವ ಸದಸ್ಯರ ಸಭೆಯನ್ನು ದಿನಾಂಕ 26-07-2026 ರ ಭಾನುವಾರ ಬೆಳಿಗ್ಗೆ 10.30 ಘಂಟೆಗೆ, ಸ್ಟೆಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ , ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು - 560 034 ಇಲ್ಲಿ ಈ ಕೆಳಕಂಡ ಕಾರ್ಯಸೂಚಿ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಳ್ಳಲು ಕರೆಯಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಭೆಯಲ್ಲಿ ಭಾಗವಹಿಸಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿ ಕೊಡಬೇಕಾಗಿ ವಿನಂತಿಸುತ್ತೇವೆ.

| | ಕಾರ್ಯಸೂಚಿ ವಿಷಯಗಳು: | ಪುಟ ಸಂಖ್ಯೆ |
|---|---|---|
| 1. | ಪ್ರಾರ್ಥನೆ | |
| 2. | ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು | 1 |
| 3. | ಅಧ್ಯಕ್ಷರಿಂದ ಸ್ವಾಗತ ಭಾಷಣ | |
| 4. | ದಿನಾಂಕ 17-08-2025ರ ಭಾನುವಾರ ನಡೆದ 25ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು | 2-6 |
| 5. | 2025-26ರ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು. | 7-9 |
| 6. | 2025-26ರ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅನುಪಾಲನಾ ವರದಿಯ ಅಂಗೀಕಾರ | 10-27 |
| 7. | 2025-26ರ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು. | 28 |
| 8. | 2025-26 ನೇ ಸಾಲಿನಲ್ಲಿ ಅಂದಾಜಿಗಿಂತ ಹೆಚ್ಚಿಗೆ ಖರ್ಚಾಗಿರುವ ವೆಚ್ಚಗಳನ್ನು ಅಂಗೀಕರಿಸುವುದು. ಹಾಗೂ 2026-27 ನೇ ಸಾಲಿನ ಮಂಜೂರಾದ ಅಂದಾಜು ಆಯವ್ಯಯಗಳ ಪುನರ್ ಪರಿಶೀಲನೆಯ ಅನುಮೋದನೆ ಮತ್ತು 2027-28 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವುದು | 29 |
| 9. | 2026-27ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರ ನೇಮಕಾತಿಯ ಮಾಹಿತಿ. | |
| 10 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು | |
| 11 | ವಂದನಾರ್ಪಣೆ | |

ಆಡಳಿತ ಮಂಡಳಿಯ ಪರವಾಗಿ
ಸಹಿ/-
( ಶಿವಣ್ಣ. ಕೆ.ಬಿ. )
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬೆಂಗಳೂರು

**ದಿನಾಂಕ :** 23-06-2026

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ.1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034

## 25 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಗಳು

ದಿನಾಂಕ 17.08.2025ನೇ ಭಾನುವಾರ ಬೆಳಿಗ್ಗೆ 10.30 ಗಂಟೆಗೆ , ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಕೋರಮಂಗಲ, ಬೆಂಗಳೂರು - 560 034 ಇಲ್ಲಿನ ಸಭಾಂಗಣದಲ್ಲಿ ನಡೆದ ಬ್ಯಾಂಕಿನ 25ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಗಳು.

ಹಾಜರಿದ್ದ ಸದಸ್ಯರ ಸಂಖ್ಯೆ - 1079

ವಿಷಯ : 1.ಪ್ರಾರ್ಥನೆ

ಕು|| ಆದ್ಯಾ ರವರು ದೇವತಾ ಪ್ರಾರ್ಥನೆ ಮಾಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ವಿಷಯ : 2. 2024-25ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು.

ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಾದ ಶ್ರೀ ಶಿವಣ್ಣ ಕೆ.ಬಿ.ರವರು 2024-25ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿದ ನಂತರ ಸದಸ್ಯರ ಅನುಮತಿ ಪಡೆದು ದಾಖಲಿಸಲಾಯಿತು.

ವಿಷಯ : 2.1 ಸಂತಾಪ ಸೂಚನೆ.

ವರದಿ ಸಾಲಿನಲ್ಲಿ ಮರಣ ಹೊಂದಿದ ಬ್ಯಾಂಕಿನ ಸದಸ್ಯರುಗಳ ಹೆಸರುಗಳನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಓದಿದರು. ನಂತರ ಮೃತರ ಗೌರವಾರ್ಥ, ಸದಸ್ಯರು ಎರಡು ನಿಮಿಷಗಳ ಮೌನಾಚರಣೆ ಮಾಡಿ ಅಗಲಿದ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸಿದರು.

ವಿಷಯ : 3. ಅಧ್ಯಕ್ಷರಿಂದ ಸ್ವಾಗತ ಭಾಷಣ

ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಮುನಿರೆಡ್ಡಿ ಎಂ. ರವರು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರನ್ನು , ಆಡಳಿತ ಮಂಡಳಿಯ ನಿರ್ದೇಶಕರನ್ನು ಸ್ವಾಗತಿಸುತ್ತಾ, ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಜೊತೆಯಲ್ಲಿ ಬ್ಯಾಂಕಿನ ರಜತ ಮಹೋತ್ಸವ ಆಚರಿಸುತ್ತಿರುವುದು ಸಂತೋಷದ ವಿಷಯವಾಗಿದೆ ಎಂದು ಸಭೆಗೆ ತಿಳಿಸಿದರು.

ದಿನಾಂಕ 30-12-2022 ರಂದು ಕರ್ನಾಟಕ ಸರ್ಕಾರದ ವತಿಯಿಂದ ನಡೆದ ಸಹಕಾರ ಫಲಾನುಭವಿಗಳ ಸಮಾವೇಶದಲ್ಲಿ ಉಪಸ್ಥಿತರಿದ್ದ ಕೇಂದ್ರ ಹಾಗೂ ರಾಜ್ಯ ಸಹಕಾರ ಸಚಿವರ ಸಮ್ಮುಖದಲ್ಲಿ ನಮ್ಮ ಬ್ಯಾಂಕನ್ನು "ಉತ್ತಮ ಸಹಕಾರಿ ಬ್ಯಾಂಕ್ " **(Best Co-operative Bank)** ಎಂದು ಗುರುತಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿರುವುದನ್ನು ಸಭೆಗೆ ತಿಳಿಸಿದರು.

ಬ್ಯಾಂಕಿನ 2024-25ನೇ ಸಾಲಿನ ಆರ್ಥಿಕ ಅಂಕಿ ಅಂಶಗಳನ್ನು ಸಭೆಯಲ್ಲಿ ಮಂಡಿಸುತ್ತಾ, ಬ್ಯಾಂಕ್ ಪ್ರಾರಂಭವಾದಾಗಿನಿಂದ ಇದುವರೆಗೂ ಪ್ರಗತಿ ಹೊಂದುತ್ತಾ ಬಂದಿದ್ದು ಮಾರ್ಚ್ 2025ರಂತ್ಯಕ್ಕೆ ರೂ. 16 ಕೋಟಿ 19 ಲಕ್ಷ ಷೇರು ಬಂಡವಾಳ, ರೂ. 302 ಕೋಟಿ 39 ಲಕ್ಷ ಠೇವಣಿ ಸಂಗ್ರಹಿಸಿದ್ದು, ರೂ. 143 ಕೋಟಿ 4 ಲಕ್ಷ ಸಾಲ ನೀಡಲಾಗಿದೆ ಮತ್ತು ಬ್ಯಾಂಕಿನ ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು ರೂ. 89 ಕೋಟಿ 38 ಲಕ್ಷಗಳಿವೆ ಎಂದು ತಿಳಿಸಿದರು.

❖ 2024-25ನೇ ಸಾಲಿನಲ್ಲಿ ಬ್ಯಾಂಕಿನ ಒಟ್ಟು ಆದಾಯ ರೂ. 32 ಕೋಟಿ 03 ಲಕ್ಷ ಆಗಿದ್ದು, ಇದರಲ್ಲಿ ಠೇವಣಿ ಮೇಲಿನ ಬಡ್ಡಿ, ಆಡಳಿತಾತ್ಮಕ ವೆಚ್ಚ, ಆದಾಯ ತೆರಿಗೆ, ಆಸ್ತಿಗಳ ಮೇಲಿನ ಸವಕಳಿ ಮತ್ತು ಅವಕಾಶಗಳನ್ನು ಕಳೆದು ರೂ. 9 ಕೋಟಿ 35 ಲಕ್ಷ ನಿವ್ವಳ ಲಾಭಗಳಿಸಿದ್ದೇವೆ ಎಂದು ತಿಳಿಸಿದರು.

❖ 2024-25ನೇ ಸಾಲಿನಲ್ಲಿ ಬ್ಯಾಂಕ್ ರೂ. 2 ಕೋಟಿ 64 ಲಕ್ಷಗಳ ಅನುತ್ಪಾದಕ ಆಸ್ತಿಯನ್ನು ಹೊಂದಿದ್ದು ಇದು ಬ್ಯಾಂಕಿಗೆ ಬರಬೇಕಾದ ಒಟ್ಟು ಸಾಲಗಳ ಶೇ. 1.85 ರಷ್ಟಿದೆ. ಹಿಂದಿನ ಸಾಲಿನಲ್ಲಿ ಇದು ಶೇ. 1.83 ರಷ್ಟಿತ್ತು. ದಿನಾಂಕ 31.3.2025ಕ್ಕೆ ನಿವ್ವಳ ಅನುತ್ಪಾದಕ ಆಸ್ತಿ ( Net NPA - 0%) ಶೂನ್ಯವಾಗಿರುತ್ತದೆ . ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಆಕ್ಟ್ ಅಡಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ. ಸಾಲ ತೆಗೆದುಕೊಂಡಿರುವ ಸದಸ್ಯರು ಯಾವುದೇ ಕಾರಣಕ್ಕೂ ವಸೂಲಾತಿ ಕಾರ್ಯಕ್ಕಾಗಿ ಕಾನೂನು ಕ್ರಮ ಜರುಗಿಸಲು ಅಸ್ಪದ ನೀಡದೆ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿಸುವ ಮೂಲಕ ಸಹಕರಿಸಬೇಕೆಂದು ಕೋರಿದರು.

❖ ಬ್ಯಾಂಕಿನ ವ್ಯವಹಾರವನ್ನು ವಿಸ್ತರಿಸಲು ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಒಂದು ಶಾಖೆಯನ್ನು ಶೀಘ್ರದಲ್ಲಿಯೇ ತೆರೆಯಲಾಗುವುದು ಎಂದು ಸಭೆಗೆ ತಿಳಿಸಿದರು.

❖ ಬ್ಯಾಂಕಿನ ಸದಸ್ಯರ ಅನುಕೂಲಕ್ಕಾಗಿ ಕಳೆದ ಐದು ವರ್ಷಗಳಿಂದ ವಿವಿಧ ಸಾಲಗಳ ಮೇಲಿನ ಬಡ್ಡಿ ದರಗಳಲ್ಲಿ ಹಂತ ಹಂತವಾಗಿ ಸುಮಾರು ಶೇ 5.00 ರಷ್ಟು ಬಡ್ಡಿ ಕಡಿತ ಮಾಡಲಾಗಿದೆ. ಗೃಹಸಾಲ ನೀಡಿಕೆಯ ವೈಯುಕ್ತಿಕ ಮಿತಿಯನ್ನು ರೂ. 70 ಲಕ್ಷದಿಂದ 1 ಕೋಟಿ 40 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಆರ್‌ಬಿಐ ನಿಗದಿಪಡಿಸಿರುವ ಆದ್ಯತಾ ವಲಯದ ಸಾಲದ ಗುರಿಯನ್ನು ಸಾಧಿಸಲು ಸಾಧ್ಯವಾಗುವ ರೀತಿಯಲ್ಲಿ ಸಾಲಗಳನ್ನು ನೀಡಲಾಗುವುದು. ನಮ್ಮ ಬ್ಯಾಂಕಿನ ಗೃಹಸಾಲ, ವಾಹನ ಸಾಲ, ಮಕ್ಕಳ ವಿದ್ಯಾಭ್ಯಾಸದ ಸಾಲ ಇತ್ಯಾದಿ ಸಾಲಗಳ ಮೇಲಿನ ಬಡ್ಡಿ ದರವು ಅತ್ಯಂತ ಕಡಿಮೆ ಇದೆ. ಅಲ್ಲದೆ ಸಾಲಗಳ ಮೇಲಿನ ನಿರ್ವಹಣಾ ಶುಲ್ಕವನ್ನು (Loan Processing Charges) ಶೇ. 1.00 ರಿಂದ ಶೇ. 0.25ಕ್ಕೆ ಇಳಿಸಿದ್ದು ಇದರಿಂದ ಸಾಲ ಪಡೆಯುವ ನಮ್ಮ ಬ್ಯಾಂಕಿನ ಸದಸ್ಯರಿಗೆ ಅನುಕೂಲವಾಗಲಿದೆ ಎಂದು ತಿಳಿಸಿದರು.

❖ ನಮ್ಮ ಬ್ಯಾಂಕಿನ ಗ್ರಾಹಕರ ಅವಶ್ಯಕತೆಗಳನ್ನು ಪೂರೈಸಲು ಕೋರ್ ಬ್ಯಾಂಕಿಂಗ್ ವ್ಯವಸ್ಥೆ, ATM card , RTGS, IMPS, Mobile Banking ಸೌಲಭ್ಯಗಳನ್ನು ನೀಡುತ್ತಿದ್ದೇವೆ. ಅಲ್ಲದೆ ಅತ್ಯಾಧುನಿಕ ತಂತ್ರಜ್ಞಾನದ ಯುಪಿಐ ಸೌಲಭ್ಯವನ್ನು ಸಹ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಬಳಸಿ ಗ್ರಾಹಕರು ಗೂಗಲ್ ಪೇ, ಫೋನ್‌ಪೇ, ಪೇಟಿಎಂ ಮುಖಾಂತರ ಹಣ ವರ್ಗಾವಣೆ ಮತ್ತು ಬಿಲ್ ಪಾವತಿ ಮಾಡಬಹುದಾಗಿದೆ ಎಂದು ತಿಳಿಸಿದರು.

❖ ಬ್ಯಾಂಕಿನ ಸದಸ್ಯರು ಸಾಮಾನ್ಯವಾಗಿ ಪ್ರತಿಯೊಂದು ವಾರ್ಷಿಕ ಸರ್ವ ಸದಸ್ಯರ ಸಭೆಗೆ ಹಾಜರಾಗತಕ್ಕದ್ದು, ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿಯಂತೆ ಸದಸ್ಯರು ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ಕನಿಷ್ಟ ವ್ಯವಹಾರ ಮಾಡದಿದ್ದಲ್ಲಿ ಅಂತಹ ಸದಸ್ಯರು ಒಂದು ವರ್ಷಗಳವರೆಗೆ ಸಾಮಾನ್ಯ ಸಭೆಯಲ್ಲಿ ಮತ ನೀಡುವ ಹಕ್ಕನ್ನು ಹಾಗೂ ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಮತ್ತು ಸ್ಪರ್ಧಿಸುವ ಹಕ್ಕನ್ನು ಹೊಂದಿರುವುದಿಲ್ಲ, ಆದ್ದರಿಂದ ಮಾನ್ಯ ಸದಸ್ಯರು ಬ್ಯಾಂಕಿನಲ್ಲಿ ಖಾತೆಗಳನ್ನು ತೆರೆದು ವ್ಯವಹಾರ ಮಾಡಲು ಕೋರಿದರು.

❖ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಸದಸ್ಯರುಗಳಿಗೂ, ಗ್ರಾಹಕರಿಗೂ, ಪ್ರಾರಂಭಿಕ ಅಧ್ಯಕ್ಷರಾಗಿದ್ದ ಶ್ರೀಯುತ ನಾಗರಾಜ ಎಂ. ರವರಿಗೂ, ಹಿಂದಿನ ಹಾಗೂ ಪ್ರಸ್ತುತ ಆಡಳಿತ ಮಂಡಳಿ ಸದಸ್ಯರುಗಳಿಗೂ, ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗೂ ಹಾಗೂ ಬ್ಯಾಂಕಿನ ಲೆಕ್ಕಪರಿಶೋಧಕರಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳನ್ನು ತಿಳಿಸಿದರು.

ವಿಷಯ : 4. ದಿನಾಂಕ 28-07-2024 ರಂದು ನಡೆದ 24ನೇ ಸರ್ವ ಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.

ದಿನಾಂಕ 28-07-2024 ರಂದು ನಡೆದ 24ನೇ ಸರ್ವ ಸದಸ್ಯರ ಸಭೆಯ ನಡವಳಿಯನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸಭೆಯ ಮುಂದೆ ಓದಿದರು. ನಂತರ ಅದನ್ನು ದಾಖಲಿಸಲು ಸಭೆಯ ಅನುಮತಿಯನ್ನು ಕೋರಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ವಿಷಯ : 5. ದಿನಾಂಕ 2024-25ರ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು.

2024-25ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸಭೆಯ ಮುಂದೆ ಮಂಡಿಸಿದರು. ನಂತರ ಆದನ್ನು ದಾಖಲಿಸಲು ಸಭೆಯ ಅನುಮತಿಯನ್ನು ಕೋರಿದರು. ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ವಿಷಯ :6. 2024-25ನೇ ಸಾಲಿನ ಆಡಿಟ್ ಆದ ಆಸ್ತಿ ಜವಾಬ್ದಾರಿ ತಃಖ್ತೆ ಮತ್ತು ಲಾಭ - ನಷ್ಟದ ತಃಖ್ತೆ ಹಾಗೂ ಲೆಕ್ಕ ಪತ್ರಗಳ ಪರಿಶೀಲನೆ ಮತ್ತು ಅಂಗೀಕಾರ

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಯುತ ನಾರಾಯಣ್ ಎಸ್. ಭಟ್ ರವರು 2024-25ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆ ಹಾಗೂ ಲಾಭ ನಷ್ಟದ ತಃಖ್ತೆಗಳನ್ನು ಸಭೆಯಲ್ಲಿ ಮಂಡಿಸಿ ಈ ಬಗ್ಗೆ ಸದಸ್ಯರ ಅಂಗೀಕಾರ ಕೋರಿದರು.

ಬ್ಯಾಂಕಿನ ಸದಸ್ಯರಾದ ಶ್ರೀ ಶ್ರೀನಿವಾಸ್ ಎಸ್.ಎನ್. (ಎಂ. 3280) ರವರು 2024-25ನೇ ಸಾಲಿನ ಲೆಕ್ಕ ಪರಿಶೋಧಕರ ವರದಿ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಗಳನ್ನು ಒಪ್ಪಬಹುದೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಶ್ರೀ ಕೃಷ್ಣಾರೆಡ್ಡಿ (ಎಂ. 5736) ರವರು ಅನುಮೋದಿಸಿದರು.

ಹಾಗೂ ಬ್ಯಾಂಕಿನ ಸದಸ್ಯರಾದ ಶ್ರೀ ಶೇಷಗಿರಿ ಎಸ್.ಎನ್. (ಎಂ.2736) ರವರು 2024–25ನೇ ಸಾಲಿನ ಲಾಭ-ನಷ್ಟದ ತಃಖ್ತೆಗಳನ್ನು ಒಪ್ಪಬಹುದೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಶ್ರೀ ರಾಘವೇಂದ್ರ ಕಮರ್ತಿ ರವರು (ಎಂ. 61) ಅನುಮೋದಿಸಿದರು. ಆದರಂತೆ 2024-25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆ ಹಾಗೂ ಲಾಭ-ನಷ್ಟದ ತಃಖ್ತೆಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

ವಿಷಯ : 7. 2024-25 ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು.

ಬ್ಯಾಂಕಿನ 2024-25ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಬ್ಯಾಂಕಿನ ಉಪಾಧ್ಯಕ್ಷರು ಸಭೆಯಲ್ಲಿ ಓದಿ ಪ್ರಸ್ತಾವನೆಯನ್ನು ಮಂಡಿಸಿದ್ದು ಈ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಸದಸ್ಯರ ಸರ್ವಾನುಮತದ ಅಂಗೀಕಾರವನ್ನು ಪಡೆಯಲಾಯಿತು.

ವಿಷಯ :8. 2025-26ನೇ ಸಾಲಿನ ಮಂಜೂರಾದ ಅಂದಾಜು ಆಯವ್ಯಯಗಳ ಪುನರ್ ಪರಿಶೀಲನೆಯ ಅನುಮೋದನೆ ಹಾಗೂ 2026-27ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಅನುಮೋದಿಸುವುದು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀಯುತ ನಾರಾಯಣ್ ಎಸ್. ಭಟ್‌ರವರು 2025-26ನೇ ಸಾಲಿನ ಮಂಜೂರಾದ ಆಯ-ವ್ಯಯಗಳ ಪುನರ್ ಪರಿಶೀಲನೆ ಹಾಗೂ 2026-27 ನೇ ಸಾಲಿನಲ್ಲಿ ಆಗಬಹುದಾದ ಅಂದಾಜು ಆಯ-ವ್ಯಯಗಳಿಗೆ ಒಪ್ಪಿಗೆ ಕೋರಿದರು.

ಬ್ಯಾಂಕಿನ ಸದಸ್ಯರಾದ ಶ್ರೀ ಲಿಂಗಾ ರೆಡ್ಡಿ .ಕೆ.(ಎಂ. 841) ರವರು ಮೇಲ್ಕಂಡ ಪ್ರಸ್ತಾವನೆಯನ್ನು ಒಪ್ಪಬಹುದೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಶ್ರೀ ಎಂ. ನಾಗರಾಜ ರೆಡ್ಡಿ (ಎಂ. 2028) ರವರು ಅನುಮೋದಿಸಿದರು. ಅದರಂತೆ ಮೇಲಿನ ಪ್ರಸ್ತಾವನೆಗೆ ಸದಸ್ಯರ ಸರ್ವಾನುಮತದ ಒಪ್ಪಿಗೆ ಪಡೆಯಲಾಯಿತು.

ವಿಷಯ :9. 2025-26ನೇ ಸಾಲಿಗೆ ಲೆಕ್ಕಪರಿಶೋಧಕರ ನೇಮಕಾತಿಯ ಬಗ್ಗೆ ಮಾಹಿತಿ.

ಬ್ಯಾಂಕಿನ ಉಪಾಧ್ಯಕ್ಷರು ಲೆಕ್ಕ ಪರಿಶೋಧಕರ ನೇಮಕಾತಿಯ ಬಗ್ಗೆ ಮಹಾಸಭೆಯಲ್ಲಿ ವಿವರಿಸುತ್ತಾ, ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ದಿನಾಂಕ 27-04-2021ರಂತೆ ಪಟ್ಟಣ ಸಹಕಾರಿ ಬ್ಯಾಂಕುಗಳು ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ನೀಡಿದ್ದು , ಒಂದು ಲೆಕ್ಕಪರಿಶೋಧನಾ ಸಂಸ್ಥೆಯನ್ನು 3 ವರ್ಷಗಳವರೆಗೆ ನಿರಂತರವಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ. ಅಲ್ಲದೆ ಪ್ರತಿ ವರ್ಷವು ಲೆಕ್ಕ ಪರಿಶೋಧಕರ ನೇಮಕ ಅಥವಾ ಮರು ನೇಮಕ ಮಾಡಿಕೊಳ್ಳಲು ಆರ್‌ಬಿಐಗೆ ಪ್ರಸ್ತಾವನೆಯನ್ನು ಕಳುಹಿಸಿ ಒಪ್ಪಿಗೆ ಪಡೆಯಬೇಕಾಗಿರುತ್ತದೆ. ಅದರಂತೆ 2024-25ರಲ್ಲಿ ನಮ್ಮ ಬ್ಯಾಂಕಿನ ಶಾಸನ ಬದ್ಧ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯಾದ M/s CSMR & Associates ರವರನ್ನು 2025-26ನೇ ಸಾಲಿನ ಲೆಕ್ಕ ಪರಿಶೋಧನೆಗಾಗಿ ಮರು ನೇಮಕ ಮಾಡಿ ಕೊಳ್ಳಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿ ಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು. ಅಲ್ಲದೆ ಶಾಸನ ಬದ್ಧ ಲೆಕ್ಕ ಪರಿಶೋಧಕರ ಸಂಭಾವನೆಯಾಗಿ ರೂ. 2,62,000/- + ಜಿಎಸ್‌ಟಿ ಮೊತ್ತವನ್ನು ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ವಿಷಯ : 10 ಬ್ಯಾಂಕಿನ ಸಿಬ್ಬಂದಿ ವೃಂದಬಲವನ್ನು ಹೆಚ್ಚಿಸುವ ಪ್ರಸ್ತಾವನೆ.

ಬ್ಯಾಂಕಿನ ಅಧ್ಯಕ್ಷರು ಮಹಾಸಭೆಯಲ್ಲಿ ಸಿಬ್ಬಂದಿ ನೇಮಕಾತಿ ವಿಷಯವನ್ನು ಪ್ರಸ್ತಾಪಿಸುತ್ತಾ, ನಮ್ಮ ಬ್ಯಾಂಕು ದಿನಾಂಕ 23-6-2000 ರಂದು ಕಾರ್ಯಾರಂಭ ಮಾಡಿದ್ದು , ನಂತರ ದಿನಾಂಕ 30-10-2004 ರಂದು ರಾಜ್ಯ ಸಹಕಾರ ಇಲಾಖೆಯಿಂದ 19 ಸಿಬ್ಬಂದಿ ಹುದ್ದೆಗಳು ಮಂಜೂರಾಗಿರುತ್ತವೆ. ಪ್ರಸ್ತುತ ಬ್ಯಾಂಕಿನಲ್ಲಿ 15 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು 4 ಹುದ್ದೆಗಳು ಖಾಲಿ ಇರುತ್ತವೆ.

ಬ್ಯಾಂಕಿನ ವ್ಯವಹಾರಗಳಲ್ಲಿನ ಬೆಳವಣಿಗೆ, ಕೆಲಸದ ಒತ್ತಡ ಮತ್ತು ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಒಂದು ಶಾಖೆಯನ್ನು ತೆರೆಯಲು ಆಡಳಿತ ಮಂಡಳಿಯು ನಿರ್ಧರಿಸಿದ್ದು ಇದರಿಂದಾಗಿ ಹೊಸದಾಗಿ ಒಂಬತ್ತು ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಅವಶ್ಯಕತೆ ಇರುತ್ತದೆ ಮತ್ತು ಸಿಬ್ಬಂದಿ ನೇಮಕಾತಿಯ ಪ್ರಕ್ರಿಯೆಯನ್ನು ಸಹಕಾರ ಸಂಘಗಳ ನಿಬಂಧಕರು ಅಥವಾ ಅವರ ಪ್ರತಿನಿಧಿಯವರ ಮೇಲ್ವಿಚಾರಣೆಯಲ್ಲಿ ನಡೆಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿ ಸದಸ್ಯರು ಪ್ರಸ್ತಾವಿತ ಸಿಬ್ಬಂದಿ ವೃಂದ ಬಲಕ್ಕೆ ಅನುಮೋದನೆ ನೀಡಬೇಕೆಂದು ಕೋರಿದರು.

ಸರ್ವಸದಸ್ಯರ ಸಭೆಯಲ್ಲಿ ಈ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ಬ್ಯಾಂಕಿನ ಸದಸ್ಯರಾದ ಶ್ರೀ ಗೋವಿಂದ ರಾಜು ಡಿ.ಎಸ್. (ಎಂ.4732) ರವರು ಪ್ರಸ್ತಾವನೆಯನ್ನು ಒಪ್ಪ ಬಹುದೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಸದಸ್ಯರಾದ ಶ್ರೀ ಮಲ್ಲೇಶಪ್ಪ ಆರ್. (ಎಂ. 2521) ರವರು ಅನುಮೋದಿಸಿದರು. ಅದರಂತೆ ಸರ್ವ ಸದಸ್ಯರ ಸಭೆಯ ಸರ್ವಾನುಮತದ ಅಂಗೀಕಾರ ಪಡೆಯಲಾಯಿತು.

ವಿಷಯ: 11 ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಶಾಖೆಯನ್ನು ತೆರೆಯುವ ಪ್ರಸ್ತಾವನೆ.

ಬ್ಯಾಂಕಿನ ಅಧ್ಯಕ್ಷರು ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತಾ, ಸದಸ್ಯರ ಕೋರಿಕೆಯಂತೆ ಪ್ರಸಕ್ತ ಸಾಲಿನಲ್ಲಿ ಬೆಂಗಳೂರಿನ ಹೆಚ್.ಎಸ್.ಆರ್ ಲೇಔಟ್‌ನಲ್ಲಿ ಒಂದು ಶಾಖೆಯನ್ನು ತೆರೆಯಲು ಆಡಳಿತ ಮಂಡಳಿಯು ನಿರ್ಧರಿಸಿದ್ದು, ಸದಸ್ಯರು ಈ ಪ್ರಸ್ತಾವನೆಯನ್ನು ಅನುಮೋದಿಸಬೇಕೆಂದು ಕೋರಿದರು.

ಶಾಖೆ ತೆರೆಯುವ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಿದ ನಂತರ ಸರ್ವಸದಸ್ಯರ ಸರ್ವಾನುಮತದ ಅಂಗೀಕಾರ ಪಡೆಯಲಾಯಿತು.

ವಿಷಯ : 12 ಇತರೆ ವಿಷಯಗಳು :ಅಧ್ಯಕ್ಷರ ಅನುಮತಿಯ ಮೇರೆಗೆ

ವಿಷಯ:12.1 ಪ್ರತಿಭಾ ಪುರಸ್ಕಾರವಾಗಿ ಅರ್ಹ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನ ನೀಡುವ ಬಗ್ಗೆ:

ಪ್ರತಿ ವರ್ಷದಂತೆ ಈ ಸಾಲಿನಲ್ಲಿಯೂ ಸಹ ನಮ್ಮ ಬ್ಯಾಂಕಿನ ಸದಸ್ಯರ ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಎಸ್.ಎಸ್.ಎಲ್.ಸಿ. ಯಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕಗಳಿಸಿದ 11 ವಿದ್ಯಾರ್ಥಿಗಳಿಗೆ ಹಾಗೂ ಎರಡನೇ ಪಿ.ಯು.ಸಿ. ಯಲ್ಲಿ ಶೇ. 80ಕ್ಕಿಂತ ಮೇಲ್ಪಟ್ಟು ಅಂಕ ಗಳಿಸಿದ 17 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ನೀಡುವ ಬಗ್ಗೆ ಸಭೆಯಲ್ಲಿ ಮಂಡಿಸಿ ಸದಸ್ಯರ ಅನುಮತಿಯನ್ನು ಪಡೆದು ಪ್ರೋತ್ಸಾಹ ಧನವನ್ನು ಬ್ಯಾಂಕಿನ ನಿರ್ದೇಶಕರುಗಳಿಂದ ವಿತರಿಸಲಾಯಿತು.

ವಿಷಯ: 13. ವಂದನಾರ್ಪಣೆ :

ಬ್ಯಾಂಕಿನ ನಿರ್ದೇಶಕರಾದ ಶ್ರೀ ಡಿ. ಪೃಥ್ವೀರಾಜ್ ರವರು ವಂದನಾರ್ಪಣೆಯನ್ನು ಪ್ರಾರಂಭಿಸಿ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರಿಗೂ, ಬ್ಯಾಂಕಿನ ಅಧ್ಯಕ್ಷರು , ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯ ನಿರ್ದೇಶಕರಿಗೂ, ಬ್ಯಾಂಕಿನ ಕಾರ್ಯನಿರ್ವಹಣೆಯಲ್ಲಿ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಿರುವ ಆರ್‌ಬಿಐ / ಆರ್‌ಸಿಎಸ್ ಅಧಿಕಾರಿ ವರ್ಗದವರಿಗೂ, ಸಭೆಯನ್ನು ನಡೆಸಲು ಸ್ಥಳಾವಕಾಶ ಮಾಡಿಕೊಟ್ಟಿರುವ ಸೈಂಟ್ ಜಾನ್ಸ್ ಆಡಿಟೋರಿಯಂನ ಆಡಳಿತ ಮಂಡಳಿಯವರಿಗೂ ವಂದನೆಗಳನ್ನು ತಿಳಿಸಿದರು. ಬ್ಯಾಂಕಿನ ಪ್ರಾರಂಭಿಕ ಅಧ್ಯಕ್ಷರಾಗಿದ್ದ ಶ್ರೀ ಎಂ. ನಾಗರಾಜ ರವರಿಗೂ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ತಿಳಿಸಿದರು. ಅಲ್ಲದೆ ಕಾನೂನು ಸಲಹೆಗಾರರಿಗೂ ಮತ್ತು ಲೆಕ್ಕ ಪರಿಶೋಧಕರಿಗೂ ಸಹ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ಶ್ರೀ ಪೃಥ್ವೀರಾಜ್ ರವರ ವಂದನಾರ್ಪಣೆಯೊಂದಿಗೆ ಸರ್ವಸದಸ್ಯರ ಸಭೆಯ ಕಾರ್ಯಕ್ರಮಗಳು ಸುಗಮವಾಗಿ ಮುಕ್ತಾಯಗೊಂಡವು

❖❖❖❖❖

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

# CHARTERED SAHAKARI BANK NIYAMITHA

ನಂ.1, 1ನೇ ಮುಖ್ಯ ರಸ್ತೆ , 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು - 560 034

## 2025-26 ನೇ ಸಾಲಿನ ಆಡಳಿತ ಮಂಡಳಿಯ ವರದಿ

ಆತ್ಮೀಯ ಸದಸ್ಯರೇ,

ನಮ್ಮ ನಿಮ್ಮೆಲ್ಲರ ಅಭಿಮಾನದ ಬ್ಯಾಂಕಿನ **26ನೇ** ವರ್ಷದ ಸರ್ವ ಸದಸ್ಯರ ಸಭೆಗೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. 2025-26ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳನ್ನು ಮತ್ತು ಆಡಳಿತ ಮಂಡಳಿಯ ವರದಿಯನ್ನು ತಮ್ಮ ಮುಂದೆ ಮಂಡಿಸಲು ಸಂತೋಷಿಸುತ್ತೇವೆ.

ದಿನಾಂಕ 30-12-2022 ರಂದು ಕರ್ನಾಟಕ ಸರ್ಕಾರದ ವತಿಯಿಂದ ನಡೆದ ಸಹಕಾರ ಫಲಾನುಭವಿಗಳ ಸಮಾವೇಶದಲ್ಲಿ ಉಪಸ್ಥಿತರಿದ್ದ ಕೇಂದ್ರ ಹಾಗೂ ರಾಜ್ಯ ಸಹಕಾರ ಸಚಿವರ ಸಮ್ಮುಖದಲ್ಲಿ ನಮ್ಮ ಬ್ಯಾಂಕನ್ನು **"ಉತ್ತಮ ಸಹಕಾರಿ ಬ್ಯಾಂಕ್"** (**Best Co-Operative Bank**) ಎಂದು ಗುರುತಿಸಿ ಪ್ರಶಸ್ತಿ ಪತ್ರ ನೀಡಿ ಗೌರವಿಸಿರುವುದನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ.

ಈ ಕೆಳಗೆ ನೀಡಿರುವ ಅಂಕಿ ಅಂಶಗಳೊಂದಿಗೆ ಬ್ಯಾಂಕ್ ಈ ವರ್ಷ ಸಾಧಿಸಿರುವ ಪ್ರಗತಿಯನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇವೆ.

**1. ಸದಸ್ಯರ ಸಂಖ್ಯೆ :**

ಬ್ಯಾಂಕಿನಲ್ಲಿ 4415 ಸಾಮಾನ್ಯ ಸದಸ್ಯರು ಹಾಗೂ 425 ಸಹ ಸದಸ್ಯರು ಇರುತ್ತಾರೆ.

ಈ ಆರ್ಥಿಕ ವರ್ಷದ ಪ್ರಾರಂಭದಲ್ಲಿ 4402 ಸಾಮಾನ್ಯ ಸದಸ್ಯರಿದ್ದು ವರದಿ ಸಾಲಿನಂತ್ಯಕ್ಕೆ 4415 ಸಾಮಾನ್ಯ ಸದಸ್ಯರಿರುತ್ತಾರೆ. ಹಾಗೂ ವರದಿ ಸಾಲಿನ ಪ್ರಾರಂಭದಲ್ಲಿ 415 ಸಹ ಸದಸ್ಯರಿದ್ದು ಈ ಸಾಲಿನಂತ್ಯಕ್ಕೆ ಸಹ ಸದಸ್ಯರ ಸಂಖ್ಯೆಯು 425 ಆಗಿರುತ್ತದೆ.

**2. ಪಾವತಿಯಾದ ಷೇರು ಬಂಡವಾಳ : ರೂ. 1819.56 ಲಕ್ಷಗಳು**

ಈ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಬ್ಯಾಂಕು ರೂ. 1618.92 ಲಕ್ಷ ಪಾವತಿಯಾದ ಷೇರು ಬಂಡವಾಳವನ್ನು ಹೊಂದಿದ್ದು ದಿನಾಂಕ 31-3-2026ಕ್ಕೆ ರೂ. 1819.56 ಲಕ್ಷ ಪಾವತಿಯಾದ ಷೇರು ಬಂಡವಾಳವನ್ನು ಹೊಂದಿರುತ್ತದೆ.

**3. ಅಪದ್ಧನ ಹಾಗೂ ಇತರೆ ನಿಧಿಗಳು : ರೂ. 9592.68 ಲಕ್ಷಗಳು**

ಬ್ಯಾಂಕಿನ ಅಪದ್ಧನ ಹಾಗೂ ಇತರೆ ನಿಧಿಗಳು ದಿನಾಂಕ 31-03-2025ಕ್ಕೆ ರೂ. 8938.64 ಲಕ್ಷಗಳಾಗಿರುತ್ತವೆ. ಹಾಗೂ 2025-26ನೇ ಸಾಲಿನಲ್ಲಿ ಈ ನಿಧಿಗಳು ರೂ. 9592.68 ಲಕ್ಷ ಅಂದರೆ ಶೇಕಡಾ 7.32 ರಷ್ಟು ಹೆಚ್ಚಳವಾಗಿರುತ್ತದೆ.

**4. ಠೇವಣಿಗಳು : ರೂ. 32780.58 ಲಕ್ಷಗಳು**

ಈ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಬ್ಯಾಂಕು ರೂ. 30239.28 ಲಕ್ಷ ಠೇವಣಿ ಹೊಂದಿದ್ದು ದಿನಾಂಕ 31-3-2026ರಂತ್ಯಕ್ಕೆ ರೂ. 32780.58 ಲಕ್ಷ ಠೇವಣಿಯನ್ನು ಸಂಗ್ರಹಿಸಲಾಗಿದೆ. ಈ ಪ್ರಗತಿಗೆ ಮಾನ್ಯ ಸದಸ್ಯರು ಹಾಗೂ ಗ್ರಾಹಕರು ಬ್ಯಾಂಕಿನ ಮೇಲೆ ಇಟ್ಟಿರುವ ಅಭಿಮಾನ ಮತ್ತು ವಿಶ್ವಾಸವೇ ಕಾರಣವಾಗಿದ್ದು ಮುಂಬರುವ ವರ್ಷಗಳಲ್ಲೂ ಸಹ ಇದೇ ರೀತಿ ಸಹಕರಿಸಬೇಕಾಗಿ ಕೋರುತ್ತೇವೆ.

**5. ಹೂಡಿಕೆಗಳು : ರೂ. 29433.44 ಲಕ್ಷಗಳು**

ಈ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಬ್ಯಾಂಕು ರೂ. 25695.35 ಲಕ್ಷ ಹೂಡಿಕೆಗಳನ್ನು ಹೊಂದಿದ್ದು ದಿನಾಂಕ 31-3-2026ರಂತ್ಯಕ್ಕೆ ರೂ. 29433.44 ಲಕ್ಷಗಳಷ್ಟು ಇರುತ್ತದೆ. ಈ ಹೂಡಿಕೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಭದ್ರತಾ ಸಾಲ ಪತ್ರಗಳಲ್ಲಿ ಎಸ್.ಎಲ್. ಆರ್. ಹೂಡಿಕೆಯಾಗಿ ರೂ. 22232.44 ಲಕ್ಷಗಳಷ್ಟು ಮತ್ತು ಮ್ಯೂಚುವಲ್ ಫಂಡ್‌ನಲ್ಲಿ ರೂ. 3000 ಲಕ್ಷ ಇರುತ್ತದೆ. ಹಾಗೂ ಇತರೆ ಬ್ಯಾಂಕುಗಳ ನಿಶ್ಚಿತ ಠೇವಣಿಯಲ್ಲಿ ರೂ. 4201.00 ಲಕ್ಷ ಹೂಡಿಕೆ ಮಾಡಲಾಗಿದೆ.

## 6. ಸಾಲ ಮತ್ತು ಮುಂಗಡಗಳು : ರೂ. 14766.85 ಲಕ್ಷಗಳು

ಈ ಆರ್ಥಿಕ ವರ್ಷದ ಪ್ರಾರಂಭದಲ್ಲಿ ರೂ. 14303.62 ಲಕ್ಷಗಳಿದ್ದ ಸಾಲ ಮತ್ತು ಮುಂಗಡಗಳು ದಿನಾಂಕ 31-3-2026ಕ್ಕೆ ರೂ. 14766.85 ಲಕ್ಷಗಳಾಗಿರುತ್ತದೆ. ಆರ್‌ಬಿಐ ನಿರ್ದೇಶನ ಹಾಗೂ ಸಾಲದ ನೀತಿಯ ಚೌಕಟ್ಟಿನಲ್ಲಿ ಸದಸ್ಯರುಗಳಿಗೆ ಅವರವರ ಅಗತ್ಯಕ್ಕೆ ತಕ್ಕಂತೆ ಹಾಗೂ ಸಾಲ ನೀಡಬಹುದಾದ ವಲಯಗಳನ್ನು ಗುರುತಿಸಿ ಸರಳ ನಿಯಮದೊಂದಿಗೆ ಸಾಲ ಮತ್ತು ಮುಂಗಡಗಳನ್ನು ನೀಡಲಾಗುತ್ತಿದೆ. ಆದ್ದರಿಂದ ಮಾನ್ಯಸದಸ್ಯರುಗಳು ಬ್ಯಾಂಕಿನಲ್ಲಿ ಸಿಗಬಹುದಾದ ಸಾಲ ಸೌಲಭ್ಯಗಳನ್ನು ತಾವು ಹಾಗೂ ತಮ್ಮ ಆಪ್ತ ಸ್ನೇಹಿತರಿಗೂ ತಿಳಿಸಿ ಇದರ ಉಪಯೋಗವನ್ನು ಪಡೆದುಕೊಳ್ಳಲು ವಿನಂತಿಸುತ್ತೇವೆ.

## 7. ಅನುತ್ಪಾದಕ ಸಾಲಗಳ ( ಎನ್.ಪಿ.ಎ.) ಬಗ್ಗೆ ವಿವರಗಳು :

2025-26ನೇ ಸಾಲಿನಲ್ಲಿ ಬ್ಯಾಂಕ್ ರೂ. 307.29 ಲಕ್ಷಗಳ ಅನುತ್ಪಾದಕ ಆಸ್ತಿಯನ್ನು ಹೊಂದಿದ್ದು ಇದು ಬ್ಯಾಂಕಿಗೆ ಬರಬೇಕಾದ ಒಟ್ಟು ಸಾಲಗಳ ಶೇ. 2.08 ರಷ್ಟಿದೆ. ಹಿಂದಿನ ಸಾಲಿನಲ್ಲಿ ಇದು (ರೂ. 264.04 ಲಕ್ಷ ) ಅಂದರೆ ಶೇ. 1.85 ರಷ್ಟಿತ್ತು. ದಿನಾಂಕ 31.3.2026ಕ್ಕೆ ಬ್ಯಾಂಕ್ ಅನುತ್ಪಾದಕ ಆಸ್ತಿಗಳ ಮೇಲೆ ರೂ. 1343.08 ಲಕ್ಷಗಳ ಕರಡು ಸಾಲದ ನಿಧಿ ಹೊಂದಿದ್ದು ನಿವ್ವಳ ಅನುತ್ಪಾದಕ ಆಸ್ತಿ ( Net NPA ) ಶೂನ್ಯವಾಗಿರುತ್ತದೆ . ಅನುತ್ಪಾದಕ / ಸುಸ್ತಿ ಸಾಲದ ವಸೂಲಾತಿಗಾಗಿ ಈ ಕೆಳಗಿನ ಕ್ರಮಗಳನ್ನು ಜಾರಿಗೆ ತರಲಾಗಿದೆ.

- ಬ್ಯಾಂಕಿನಲ್ಲಿ ಸುಸ್ತಿ ಸಾಲಗಳ ಬಾಬ್ತು ವಸೂಲಾತಿಗಾಗಿ ನೋಟೀಸ್‌ಗಳನ್ನು ನಿಗದಿತ ವೇಳೆಗೆ ಜಾರಿ ಆಗುವ ಹಾಗೆ ಕ್ರಮ ಕೈಗೊಳ್ಳಲಾಗಿದೆ.
- ಸಾಲ ವಸೂಲಾತಿ ಪ್ರಗತಿಯನ್ನು ಬ್ಯಾಂಕಿನ ವ್ಯವಸ್ಥಾಪನ ಮಂಡಳಿ ಹಾಗೂ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ಸುಸ್ತಿಯಾಗಿರುವ ಸ್ಥಿರಾಸ್ತಿ ಆಧಾರ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಆಕ್ಟ್ ಅಡಿಯಲ್ಲಿ ಕ್ರಮ ಜರುಗಿಸಲಾಗುತ್ತಿದೆ.

ಸಾಲ ತೆಗೆದುಕೊಂಡಿರುವ ಮಾನ್ಯ ಸದಸ್ಯರು ಯಾವುದೇ ಕಾರಣಕ್ಕೂ ವಸೂಲಾತಿ ಕಾರ್ಯಕ್ಕಾಗಿ ಕಾನೂನು ಕ್ರಮ ಜರುಗಿಸಲು ಆಸ್ಪದ ನೀಡದೆ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿಸುವ ಮೂಲಕ ಸಹಕರಿಸಬೇಕಾಗಿ ಕೋರುತ್ತೇವೆ.

## 8. ಸಿ.ಆರ್.ಎ.ಆರ್‌ನ ಬಗ್ಗೆ ವಿಶ್ಲೇಷಣೆ:

ವರದಿ ಸಾಲಿನಲ್ಲಿ ಬ್ಯಾಂಕಿನ ಸಿಆರ್ ಎ ಆರ್ ಪ್ರಮಾಣವು ಶೇಕಡಾ 58.08 ರಷ್ಟು ಇದ್ದು , ಇದರ ಪ್ರಮಾಣವು ಕಳೆದ ಸಾಲಿನಲ್ಲಿ ಶೇಕಡಾ 56.03 ಆಗಿತ್ತು , ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯಂತೆ ಸಿ ಆರ್ ಎ ಆರ್ ನ ಪ್ರಮಾಣವು ಕನಿಷ್ಠ ಶೇಕಡಾ 12 ಕ್ಕಿಂತಲೂ ಹೆಚ್ಚಿಗೆ ಇರಬೇಕಾಗಿರುತ್ತದೆ.

## 9. ಠೇವಣಿ ಮೇಲಿನ ವಿಮೆ :

ವರದಿ ಸಾಲಿನಲ್ಲಿ ಬ್ಯಾಂಕು ಡಿಐಸಿಜಿಸಿ ಸಂಸ್ಥೆಗೆ ಸಕಾಲದಲ್ಲಿ ಅಗತ್ಯ ಮಾಹಿತಿಯನ್ನು ಸಲ್ಲಿಸುತ್ತಿದ್ದು ಠೇವಣಿ ಭದ್ರತಾ ವಿಮಾ ಕಂತನ್ನು ಕಾಲಕಾಲಕ್ಕೆ ಪಾವತಿಸುತ್ತಿದ್ದು ವಿಮಾ ಪಾಲಿಸಿಯು ಚಾಲ್ತಿಯಲ್ಲಿರುತ್ತದೆ.

## 10. ಶಾಖೆಗಳ ಕಾರ್ಯ ಪ್ರಗತಿ :

ಬ್ಯಾಂಕಿನ ಶಾಖೆಯನ್ನು ಸರ್ಜಾಪುರ ಮುಖ್ಯ ರಸ್ತೆಯಲ್ಲಿರುವ ದೊಮ್ಮಸಂದ್ರ ಸರ್ಕಲ್‌ನಲ್ಲಿ 2ನೇ ಸೆಪ್ಟಂಬರ್ 2018ರಂದು ಪ್ರಾರಂಭಿಸಲಾಗಿದ್ದು ದಿನಾಂಕ 31-03-2026ರಂತ್ಯಕ್ಕೆ ರೂ. 55 ಕೋಟಿ ಠೇವಣಿ ಸಂಗ್ರಹಣೆಯಾಗಿದ್ದು ಹಾಗೂ ರೂ. 24 ಕೋಟಿ ಸಾಲ ನೀಡಲಾಗಿದೆ.

**11. ಲೆಕ್ಕ ಪರಿಶೋಧನೆ :**

2025-26ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಮೆ|| ಸಿ.ಎಸ್.ಎಂ.ಆರ್ ಅಂಡ್ ಅಸೋಸಿಯೇಟ್ಸ್ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ರವರು ಕೈಗೊಂಡು ಸಕಾಲದಲ್ಲಿ ವರದಿಯನ್ನು ನೀಡಿರುತ್ತಾರೆ. ವರದಿ ಸಾಲಿನಲ್ಲಿಯೂ ಶಾಸನಬದ್ಧ ಲೆಕ್ಕ ಪರಿಶೋಧನೆಯಲ್ಲಿ ಬ್ಯಾಂಕಿಗೆ "ಎ" ವರ್ಗವನ್ನು ನೀಡಿರುತ್ತಾರೆಂದು ತಿಳಿಸಲು ಹರ್ಷಿಸುತ್ತೇವೆ.

**12. ಬ್ಯಾಂಕಿಗೆ ಸ್ವಂತ ನಿವೇಶನ ಖರೀದಿ ಹಾಗೂ ಹೆಚ್.ಎಸ್.ಆರ್. ಲೇಔಟ್ ಶಾಖೆಯ ಪ್ರಾರಂಭ**

ಸದಸ್ಯರ ಹಲವಾರು ವರ್ಷಗಳ ಕೋರಿಕೆಯಂತೆ ಬ್ಯಾಂಕಿಗೆ ಒಂದು ಸ್ವಂತ ನಿವೇಶನವನ್ನು ಹೊಂದಲು ಆಡಳಿತ ಮಂಡಳಿಯು ನಿರ್ಧರಿಸಿ ಹೆಚ್ ಎಸ್ ಆರ್ ಬಡಾವಣೆಯ 3ನೇ ಸೆಕ್ಟರ್‌ನಲ್ಲಿ 1283 ಚದರ ಅಡಿ ವಿಸ್ತೀರ್ಣವುಳ್ಳ ಒಂದು ಮೂಲೆ ನಿವೇಶನವನ್ನು ಬಿಡಿಎ ಹರಾಜಿನಲ್ಲಿ ರೂ. 4 ಕೋಟಿ 17 ಲಕ್ಷ ಗಳಿಗೆ ಖರೀದಿ ಮಾಡಲಾಗಿದ್ದು ಈ ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡಿದ್ದು ನಮ್ಮ ಸದಸ್ಯರ ಹಾಗೂ ಗ್ರಾಹಕರ ಅನುಕೂಲಕ್ಕಾಗಿ ದಿನಾಂಕ 29-03-2026 ರಂದು ಈ ಸ್ವಂತ ಕಟ್ಟಡದಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

**13. ಕೃತಜ್ಞತೆಗಳು :**

❖ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡುತ್ತಾ ಬಂದಿರುವ ಸರ್ವ ಸದಸ್ಯರುಗಳಿಗೂ, ಠೇವಣಿದಾರರಿಗೂ, ಗ್ರಾಹಕರಿಗೂ ಹಾಗೂ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲರಿಗೂ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

❖ ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಸೇವೆ ಸಲ್ಲಿಸಿರುವ ಬ್ಯಾಂಕಿನ ಪ್ರಾರಂಭಿಕ ಅಧ್ಯಕ್ಷರಾಗಿದ್ದ ಶ್ರೀಯುತ ನಾಗರಾಜ ಎಂ., ರವರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಉಲ್ಲೇಖಿಸುತ್ತಿದ್ದು ಅವರ ಅವಿರತ ಸೇವೆಗಾಗಿ ಆಡಳಿತ ಮಂಡಳಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

❖ ಬ್ಯಾಂಕಿನ ಬೆಳವಣಿಗೆಗೆ ಸೇವೆ ಸಲ್ಲಿಸಿರುವ ಈ ಹಿಂದಿನ ನಿರ್ದೇಶಕ ಮಂಡಳಿಯ ಎಲ್ಲಾ ಸದಸ್ಯರಿಗೂ ಆಡಳಿತ ಮಂಡಳಿಯು ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಸಲ್ಲಿಸುತ್ತದೆ.

❖ ಬ್ಯಾಂಕಿನ ಅಭಿವೃದ್ಧಿ ಕಾರ್ಯನಿರ್ವಹಣೆ ಬಗ್ಗೆ ಮೇಲುಸ್ತುವಾರಿಯಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಿರುವ ಬ್ಯಾಂಕಿನ ವ್ಯವಸ್ಥಾಪನ ಮಂಡಳಿಯ ಸದಸ್ಯರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ತಿಳಿಸುತ್ತೇವೆ.

❖ ಕಾಲಕಾಲಕ್ಕೆ ಸೂಕ್ತ ಮಾರ್ಗದರ್ಶನವನ್ನು ನೀಡುತ್ತಾ ಬಂದಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಸಂಘಗಳ ಅಧಿಕಾರಿ ವರ್ಗ, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾ ಮಂಡಳದ ಅಧಿಕಾರಿ ವರ್ಗ, ಕಾನೂನು ಸಲಹೆಗಾರರು ಹಾಗೂ ಆಸ್ತಿ ಮೌಲ್ಯ ಮಾಪಕರಿಗೂ ಸಹ ಆಡಳಿತ ಮಂಡಳಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

❖ 2025-26ನೇ ಸಾಲಿನ ಬ್ಯಾಂಕಿನ ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆ|| ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್ ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರುರವರಿಗೆ ಹಾಗೂ ಆಂತರಿಕ ಲೆಕ್ಕ ಪರಿಶೋಧಕರಾದ ಮೆ|| ಸ್ವಾನಂದ್ ಅಂಡ್ ಕೋ ರವರಿಗೂ ಆಡಳಿತ ಮಂಡಳಿಯ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

❖ ಬ್ಯಾಂಕಿನ ದೈನಂದಿನ ವ್ಯವಹಾರ ಕಾರ್ಯ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಮುನಿರೆಡ್ಡಿ .ಎಂ

ಅಧ್ಯಕ್ಷರು

ಬೆಂಗಳೂರು

ದಿನಾಂಕ : 23-06-2026

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 01-04-2025 ರಿಂದ 31-03-2026ರ ವರೆಗಿನ ಲಾಭ - ನಷ್ಟದ ತಃಖ್ತೆ

| 2024-25 ರೂ. ಪೈ | ವೆಚ್ಚಗಳ ವಿವರ | 2025-26 ರೂ. ಪೈ |
|---|---|---|
| | 1. ಠೇವಣಿ ಮೇಲಿನ ಬಡ್ಡಿ ಪಾವತಿ : | |
| 4,16,40,270.89 | ಉಳಿತಾಯ ಠೇವಣಿ ಮೇಲಿನ ಬಡ್ಡಿ | 4,45,69,713.25 |
| 5,06,72,055.00 | ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 5,30,89,308.00 |
| 5,53,25,100.00 | ಮರು ಹೂಡಿಕೆ ಠೇವಣಿ ಮೇಲಿನ ಬಡ್ಡಿ | 5,96,69,206.00 |
| 13,16,076.00 | ಆವರ್ತಕ ಠೇವಣಿ ಮೇಲಿನ ಬಡ್ಡಿ | 13,93,092.00 |
| **14,89,53,501.89** | | **15,87,21,319.25** |
| | 2. ಸಿಬ್ಬಂದಿ ಸಂಬಳ , ಪಿ ಎಫ್ ಮತ್ತು ಇತರೆ ಭತ್ಯೆಗಳು : | |
| 2,23,77,555.00 | ಸಿಬ್ಬಂದಿ ವೇತನ ಮತ್ತು ಇತರೆ ಭತ್ಯೆಗಳು | 2,61,16,512.00 |
| --- | ಸಿಬ್ಬಂದಿ ಗ್ರಾಚ್ಯೂಯಿಟಿ ಅವಕಾಶ | 6,26,116.00 |
| 10,18,825.00 | ಸಿಬ್ಬಂದಿ ಗಳಿಕೆ ರಜೆ ಅವಕಾಶ | 38,87,797.00 |
| **2,33,96,380.00** | | **3,06,30,425.00** |
| | 3. ಬಾಡಿಗೆ, ತೆರಿಗೆ, ವಿಮೆ, ವಿದ್ಯುತ್ ಇತ್ಯಾದಿ | |
| 51,87,930.00 | ಕಛೇರಿ ಬಾಡಿಗೆ | 52,77,263.00 |
| 49,892.00 | ತೆರಿಗೆ | 10,896.00 |
| 2,78,368.00 | ವಿಮೆ | 2,86,827.00 |
| 5,76,906.54 | ವಿದ್ಯುತ್ ವೆಚ್ಚ | 5,66,141.00 |
| 69,450.86 | ನೀರಿನ ವೆಚ್ಚ | 94,829.00 |
| **61,62,547.40** | | **62,35,956.00** |
| | 4.ಕಾನೂನು ಮತ್ತು ವಸೂಲಾತಿ ವೆಚ್ಚ | |
| --- | ಕಾನೂನು ವೆಚ್ಚ | **25,000.00** |
| | 5. ಅಂಚೆ, ತಂತಿ ಮತ್ತು ದೂರವಾಣಿ ವೆಚ್ಚ | |
| 13,787.00 | ಅಂಚೆ ವೆಚ್ಚ | 47,735.00 |
| 3,39,699.00 | ದೂರವಾಣಿ ವೆಚ್ಚ | 5,57,521.00 |
| **3,53,486.00** | | **6,05,256.00** |
| | 6. ಲೆಕ್ಕ ಪರಿಶೋಧಕರ ಶುಲ್ಕ | |
| 2,80,675.00 | ಶಾಸನಬದ್ಧ ಲೆಕ್ಕ ಪರಿಶೋಧನಾ ಶುಲ್ಕ | 2,85,175.00 |
| 5,04,000.00 | ಸಮವರ್ತಿ ಲೆಕ್ಕ ಪರಿಶೋಧನಾ ಶುಲ್ಕ | 5,04,000.00 |
| 3,70,460.00 | ತೆರಿಗೆ ಲೆಕ್ಕಪರಿಶೋಧನಾ ಶುಲ್ಕ | 5,17,610.00 |
| 1,36,250.00 | ಇಡಿಪಿ ಆಡಿಟ್ ಶುಲ್ಕ | 3,54,250.00 |
| **12,91,385.00** | | **16,61,035.00** |
| | 7. ಸವಕಳಿ ಹಾಗೂ ರಿಪೇರಿ ವೆಚ್ಚ | |
| 2,54,442.00 | ಪೀಠೋಪಕರಣ ಸವಕಳಿ | 3,21,859.00 |
| 4,81,164.50 | ಗಣಕಯಂತ್ರದ ಸವಕಳಿ | 11,02,037.00 |
| 43,637.00 | ಕಛೇರಿ ಸಲಕರಣೆಗಳ ಸವಕಳಿ | 82,820.00 |
| 2,91,004.00 | ಸಾಫ್ಟ್‌ವೇರ್ ಸವಕಳಿ | 2,30,706.00 |
| 97,882.00 | ವಾಹನಗಳ ಸವಕಳಿ | 83,200.00 |
| 1,71,442.50 | ಗಣಕಯಂತ್ರ ಮತ್ತು ವಿದ್ಯುತ್ ಸಲಕರಣೆಗಳ ರಿಪೇರಿ | 2,01,711.00 |
| 63,132.00 | ವಾಹನ ದುರಸ್ತಿ ಮತ್ತು ಡೀಸೆಲ್ | 1,06,977.00 |
| 11,449.00 | ಪೀಠೋಪಕರಣಗಳ ದುರಸ್ತಿ | 9,506.00 |
| **14,14,153.00** | | **21,38,816.00** |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 01-04-2025 ರಿಂದ 31-03-2026ರ ವರೆಗಿನ ಲಾಭ - ನಷ್ಟದ ತಃಖ್ತೆ

| 2024-25 (ರೂ.) | ಆದಾಯ | 2025-26 (ರೂ.) |
|---|---|---|
| | **1.** ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿ | |
| 2,06,78,828.00 | ಓ. ಡಿ. ಸಾಲಗಳ ಮೇಲಿನ ಬಡ್ಡಿ | 2,15,32,735.00 |
| 10,44,45,026.00 | ಅವಧಿ ಸಾಲಗಳ ಮೇಲಿನ ಬಡ್ಡಿ | 11,80,72,353.00 |
| **12,51,23,854.00** | | **13,96,05,088.00** |
| | **2.** ಹೂಡಿಕೆಗಳ ಮೇಲಿನ ಬಡ್ಡಿ: | |
| 78,92,051.00 | ಬ್ಯಾಂಕಿನ ಕರೆ ಹೂಡಿಕೆಗಳ ಮೇಲಿನ ಬಡ್ಡಿ | 81,29,007.00 |
| 56,66,053.00 | ಹೆಚ್‌ಡಿಎಫ್‌ಸಿ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 4,03,357.00 |
| 1,92,21,617.78 | ಮ್ಯೂಚುವಲ್ ಫಂಡ್ ಹೂಡಿಕೆಗಳ ಮೇಲಿನ ಬಡ್ಡಿ | 1,85,54,857.07 |
| 25,50,338.00 | ಕರೂರ್ ವೈಶ್ಯ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | --- |
| 14,39,386.00 | ಎಸ್. ಬಿ. ಐ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 41,75,684.00 |
| 92,68,708.00 | ಆಕ್ಸಿಸ್ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲೆ ಬಡ್ಡಿ | 17,90,035.00 |
| 3,42,842.00 | ಕರ್ನಾಟಕ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | -- |
| 10,51,59,508.78 | ಎಸ್. ಜಿ. ಎಲ್. ಹೂಡಿಕೆ ಮೇಲಿನ ಬಡ್ಡಿ | 12,62,99,362.12 |
| 34,18,224.00 | ಕೆನರಾ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 1,05,61,497.00 |
| 2,59,07,126.00 | ಟ್ರೆಸರಿ ಹೂಡಿಕೆಗಳ ಮೇಲಿನ ಬಡ್ಡಿ | 64,54,129.00 |
| 99,26,512.00 | ಬ್ಯಾಂಕ್ ಆಫ್ ಬರೋಡ ನಿಶ್ಚಿತ ಠೇವಣಿ ಮೇಲೆ ಬಡ್ಡಿ | 71,37,650.00 |
| --- | ಇಂಡಿಯನ್ ಬ್ಯಾಂಕಿನ ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 89,29,647.00 |
| **19,07,92,366.56** | | **19,24,35,225.19** |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 01-04-2025ರಿಂದ 31-03-2026ರ ವರೆಗಿನ ಲಾಭ - ನಷ್ಟದ ತಃಖ್ತೆ

| 2024-25 ರೂ. ಪೈ | ವೆಚ್ಚಗಳ ವಿವರ | 2025-26 ರೂ. ಪೈ |
|---|---|---|
| | 8. ಮುದ್ರಣ, ಸ್ಟೇಷನರಿ ಮತ್ತು ಜಾಹೀರಾತು | |
| 5,01,993.00 | ಮುದ್ರಣ ಮತ್ತು ಪುಸ್ತಕ ಫಾರಂ | 4,03,740.00 |
| 1,97,548.00 | ಜಾಹಿರಾತು ವೆಚ್ಚ | 3,82,748.00 |
| **6,99,541.00** | | **7,86,488.00** |
| | 9. ಇತರೆ ಖರ್ಚುಗಳು : | |
| 1,43,617.00 | ಅತಿಥಿ ಸತ್ಕಾರ | 1,36,804.00 |
| 14,406.00 | ದಿನ ಪತ್ರಿಕೆ | 11,167.00 |
| 41,976.00 | ಸಿಬಿಲ್ ವೆಚ್ಚಗಳು | 54,194.00 |
| 2,33,648.00 | ಸ್ವಚ್ಛತೆಗೆ | 2,85,492.00 |
| 23,33,985.34 | ಡಿಜಿಟಲ್ ಟ್ರಾನ್ಸ್ಯಾಕ್ಷನ್ ಮತ್ತು ಪೇಮೆಂಟ್ ಸಿಸ್ಟಂ ಖರ್ಚು | 23,62,399.27 |
| 8,33,252.00 | ವ್ಯಾಪಾರ ಅಭಿವೃದ್ಧಿಗೆ ಸಂಬಂಧಿಸಿದ ಖರ್ಚು | -- |
| 6,80,600.50 | ಸಾಫ್ಟ್‌ವೇರ್ ನಿರ್ವಹಣಾ ವೆಚ್ಚ | 7,02,169.00 |
| 54,500.00 | ಪಿಓಎಸ್ ಶುಲ್ಕ | 59,950.00 |
| 54,500.00 | ಪಟ್ಟಣ ಸಹಕಾರ ಮಹಾಮಂಡಲದ ಸದಸ್ಯತ್ವದ ಶುಲ್ಕ | 54,500.00 |
| 13,33,906.00 | ಭದ್ರತಾ ಸಿಬ್ಬಂದಿ ಮತ್ತು ನಿರ್ವಹಣೆ | 18,86,038.00 |
| 7,097.00 | ಪ್ರಯಾಣ ವೆಚ್ಚ | 5,087.00 |
| 96,000.00 | ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಶುಲ್ಕ | 96,000.00 |
| 69,296.00 | ಎ ಟಿ ಎಂ. ಕಾರ್ಡ್ ವೆಚ್ಚ | -- |
| 1,06,533.00 | ಸರ್ಕಾರಿ ಹೂಡಿಕೆಗಳ ಮೇಲಿನ ಪ್ರೀಮಿಯಂ ತೊಡೆದದ್ದು | 1,71,638.00 |
| 37,924.57 | ಇತರೆ ಬ್ಯಾಂಕುಗಳಿಗೆ ಪಾವತಿಸಿದ ವೆಚ್ಚ | 28,514.70 |
| 39,98,119.50 | ಡಿ.ಐ.ಸಿ.ಜಿ.ಸಿ. ವಿಮಾ ಪ್ರೀಮಿಯಂ ಪಾವತಿ | 40,08,706.35 |
| 1,25,413.00 | ಪೂಜಾ ಖರ್ಚು | 1,62,158.00 |
| 45,000.00 | ಪಿಎಸ್ಎಲ್‌ಸಿ ಸರ್ಟಿಫಿಕೇಟ್ ಶುಲ್ಕ | 35,000.00 |
| 13,80,000.00 | ಪ್ರೊಫೇಷನಲ್ ವೆಚ್ಚ | 13,80,000.00 |
| 16,13,016.00 | ಸರ್ವಸದಸ್ಯರ ಸಭೆಯ ವೆಚ್ಚ | 21,12,021.00 |
| - | ಹೆಚ್.ಎಸ್.ಆರ್ ಶಾಖೆಯ ಪ್ರಾರಂಭೋತ್ಸವದ ಖರ್ಚು | 89,118.00 |
| - | ಇತರೆ ಖರ್ಚು | 36,528.00 |
| - | ಹೂಡಿಕೆಗಳ ಮೇಲಿನ ಇಳಿಕೆ ಅವಕಾಶ | 27,00,000.00 |
| **1,32,02,789.91** | | **1,63,77,484.32** |
| | 10. ಆದಾಯ ತೆರಿಗೆ : | |
| 1,56,954.00 | ಮುಂದೂಡಲ್ಪಟ್ಟ (ಡೆಫ್‌ರ್ಡ್) ತೆರಿಗೆ | ---- |
| 3,12,50,434.00 | ಆದಾಯ ತೆರಿಗೆ | 3,16,62,300.00 |
| | 11. ನಿವ್ವಳ ಲಾಭ : | |
| **9,34,82,140.00** | ನಿವ್ವಳ ಲಾಭ | **8,65,12,918.00** |
| **32,03,63,312.20** | ಜುಮ್ಲಾ | **33,53,56,997.57** |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 01-04-2025 ರಿಂದ 31-03-2026ರ ವರೆಗಿನ ಲಾಭ - ನಷ್ಟದ ತಃಖ್ತೆ

| 2024-25 (ರೂ.) | ಆದಾಯ | 2025-26 (ರೂ.) |
|---|---|---|
| | 3. ಕಮೀಷನ್, ವಿನಿಮಯ ಇತ್ಯಾದಿ | |
| 1,04,733.00 | ಪಿಓಎಸ್ ಮೆಷೀನ್ ಶುಲ್ಕ | 92,650.60 |
| 8,60,836.42 | ಬ್ಯಾಂಕರ್ ಚೆಕ್ಕುಗಳ ಕಮೀಷನ್ | 2,02,393.00 |
| 1,38,837.00 | ಆರ್‌ಟಿಜಿಎಸ್ / ಎನ್‌ಇಎಫ್‌ಟಿ ಕಮೀಷನ್ | 1,19,317.00 |
| 1,23,079.22 | ಬ್ಯಾಂಕ್ ಕಮೀಷನ್ | 1,23,108.78 |
| **12,27,485.64** | | **5,37,469.38** |
| | **4.** ಇತರೆ ಆದಾಯ : | |
| 5,24,532.00 | ಲಾಕರ್ ಬಾಡಿಗೆ | 5,24,933.00 |
| 12,009.00 | ಷೇರು ಫೀ, ಪ್ರವೇಶ ಧನ ಮತ್ತು ಷೇರು ಆರ್ಜಿ ಶುಲ್ಕ | 14,654.00 |
| 45,073.00 | ಚೆಕ್ ಪುಸ್ತಕಗಳ ಶುಲ್ಕ | 51,837.00 |
| 2,15,000.00 | ಓ.ಡಿ. ಸಾಲಗಳ ನಿರ್ವಹಣಾ ಶುಲ್ಕ | 20,000.00 |
| 2,17,822.00 | ಚೆಕ್ ವಾಪಸಾತಿ ಶುಲ್ಕ | 1,55,040.00 |
| 12,72,670.00 | ಅವಧಿ ಸಾಲಗಳ ನಿರ್ವಹಣಾ ಶುಲ್ಕ | 6,85,000.00 |
| 9,32,500.00 | ಹೂಡಿಕೆಗಳ ಮೇಲಿನ ಲಾಭ | – |
| -- | ಸಿಬ್ಬಂದಿ ನೇಮಕಾತಿ ಶುಲ್ಕ | 3,94,237.00 |
| --- | ಮುಂದೂಡಲ್ಪಟ್ಟ (ಡೆಫರ್ಡ್) ತೆರಿಗೆ | 6,71,861.00 |
| — | ಹಿಂದಿನ ಸಾಲಿನ ಆದಾಯ ತೆರಿಗೆ ಅವಕಾಶ ವಾಪಸಾತಿ | 2,61,653.00 |
| **32,19,606.00** | | **27,79,215.00** |
| **32,03,63,312.20** | ಜುಮ್ಲಾ | **33,53,56,997.57** |

ನಮ್ಮ ಇದೇ ದಿನಾಂಕದ ವರದಿಗೆ ಒಳಪಟ್ಟಂತೆ
- ಸಹಿ -
ಮೆ|| ಸಿ.ಎಸ್.ಎಂ.ಆರ್. ಅಂಡ್ ಅಸೋಸಿಯೇಟ್ಸ್
ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 31.03.2026ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ) | ಜವಾಬ್ದಾರಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ) |
|---|---|---|---|
| **25,00,00,000.00** | **ಅಧಿಕೃತ ಷೇರು ಬಂಡವಾಳ** | | **25,00,00,000.00** |
| | 1. ಸದಸ್ಯರಿಂದ ಪಾವತಿಯಾದ ಷೇರು ಬಂಡವಾಳ | | |
| 12,98,52,400.00 | ಸಾಮಾನ್ಯ ಸದಸ್ಯರಿಂದ | 15,74,03,600.00 | |
| 3,20,39,800.00 | ಸಹ ಸದಸ್ಯರಿಂದ | 2,45,52,300.00 | |
| **16,18,92,200.00** | | | **18,19,55,900.00** |
| | 2.ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು | | |
| 36,47,34,131.59 | ಆಪದ್ಧನ ನಿಧಿ | 38,84,63,452.59 | |
| 31,55,13,299.02 | ಕಟ್ಟಡದ ನಿಧಿ | 34,27,16,602.02 | |
| 74,01,283.85 | ದಾನ ಧರ್ಮದ ನಿಧಿ | 77,06,366.85 | |
| 2,06,32,998.71 | ಸದಸ್ಯರ ಯೋಗಕ್ಷೇಮ ನಿಧಿ | 2,22,33,246.71 | |
| 2,75,23,958.89 | ಸಿಬ್ಬಂದಿ ಕ್ಷೇಮ ನಿಧಿ | 2,90,15,236.89 | |
| 1,16,58,227.42 | ಜುಬಿಲಿ ನಿಧಿ | 99,11,337.42 | |
| 2,02,61,345.57 | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 2,08,41,698.57 | |
| 34,96,754.00 | ಐಟಿ/ ಸೈಬರ್ ಸೆಕ್ಯೂರಿಟಿ ಅವಕಾಶ | 55,37,002.00 | |
| 6,67,094.00 | ಆದಾಯ ತೆರಿಗೆ ಕಲಂ 36 (I) viiiರಂತೆ ವಿಶೇಷ ನಿಧಿ | 6,67,094.00 | |
| 3,46,70,208.57 | ಸಾಮಾನ್ಯ ನಿಧಿ | 3,46,70,208.57 | |
| 8,73,04,320.00 | ಹೂಡಿಕೆಗಳ ಮೇಲಿನ ಏರಿಳಿತದ ನಿಧಿ | 9,75,05,559.00 | |
| **89,38,63,621.62** | | | **95,92,67,804.62** |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 31.03.2026ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ.) | ಆಸ್ತಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ.) |
|---|---|---|---|
| **1,20,82,936.00** | 1. ನಗದು ಶಿಲ್ಕು | | **1,25,91,736.00** |
| | 2. ಬ್ಯಾಂಕುಗಳಲ್ಲಿ ಶಿಲ್ಕು | | |
| 1,00,39,707.00 | ಇಂಡಿಯನ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ | 35,15,171.00 | |
| 8,49,51,998.40 | ಯೆಸ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ | 3,82,00,153.90 | |
| 27,40,296.42 | ಎಸ್.ಬಿ.ಐ ಚಾಲ್ತಿ ಖಾತೆಯಲ್ಲಿ | 47,12,961.42 | |
| 4,49,87,526.96 | ಐ.ಡಿ.ಬಿ.ಐ. ಚಾಲ್ತಿ ಖಾತೆಯಲ್ಲಿ | 3,25,44,740.99 | |
| 2,93,52,858.67 | ಹೆಚ್.ಡಿ.ಎಫ್.ಸಿ. ಚಾಲ್ತಿ ಖಾತೆಯಲ್ಲಿ | 2,91,66,366.00 | |
| 26,19,033.12 | ಆಕ್ಸಿಸ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ | 1,09,068.12 | |
| 8,84,00,001.00 | ರಿಸರ್ವ್ ಬ್ಯಾಂಕ್ ಚಾಲ್ತಿ ಖಾತೆಯಲ್ಲಿ | 4,45,00,001.00 | |
| 57,107.29 | ಬ್ಯಾಂಕ್ಆಫ್ಬರೋಡ ಚಾಲ್ತಿ ಖಾತೆಯಲ್ಲಿ | 25,94,580.29 | |
| **26,31,48,528.86** | | | **15,53,43,042.72** |
| | 3. ಹೂಡಿಕೆಗಳು | | |
| 2,00,00,000.00 | ಎಸ್‌ಬಿಐ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | 6,00,00,000.00 | |
| 154,19,75,871.00 | ಸರ್ಕಾರಿ ಭದ್ರತಾ ಪತ್ರಗಳಲ್ಲಿ | 202,51,12,416.00 | |
| 29,00,00,000.00 | ಮ್ಯುಚುವಲ್ ಫಂಡ್ | 30,00,00,000.00 | |
| 13,00,00,000.00 | ಬ್ಯಾಂಕ್ ಆಫ್ ಬರೋಡ ನಿಶ್ಚಿತ ಠೇವಣಿ | 7,05,00,000.00 | |
| -- | ಕೆನರಾ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | 15,00,00,000.00 | |
| 13,30,00,000.00 | ಆಕ್ಸಿಸ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | -- | |
| 39,45,59,350.00 | ಟ್ರೆಸರಿ ಬಿಲ್ಸ್ | 19,81,31,300.00 | |
| 6,00,00,000.00 | ಹೆಚ್‌ಡಿಎಫ್‌ಸಿ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | – | |
| - | ಇಂಡಿಯನ್ ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ | 13,96,00,000.00 | |
| **256,95,35,221.00** | | | **294,33,43,716.00** |
| | 4. ಸಾಲ ಮತ್ತು ಮುಂಗಡಗಳು | | |
| | 1) ಅಲ್ಪಾವಧಿ ಆಧಾರ ಸಾಲ : | | |
| **23,63,28,281.22** | ಕ್ಯಾಷ್ ಕ್ರೆಡಿಟ್ /ಓಡಿ ಸಾಲ (ಸೆಕ್ಯೂರ್ಡ್) | | **15,31,12,278.22** |
| **2,06,38,586.00** | ಠೇವಣಿ ಆಧಾರಿತ ಸಾಲ | | **2,80,22,892.00** |
| | 2) ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ | | |
| | ಎ. ಆಧಾರ ಸಾಲ | | |
| **75,15,39,557.00** | ಸ್ಥಿರಾಸ್ತಿ ಆಧಾರ ಸಾಲ | 83,54,45,773.00 | |
| **19,18,36,750.00** | ಸ್ಥಿರಾಸ್ತಿ ಆಧಾರ ಸಾಲ – ಬಾಡಿಗೆ ಮೇಲಿನ ಸೋಡಿ | 17,59,17,419.00 | |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

## ದಿನಾಂಕ 31.03.2026 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ.) | ಜವಾಬ್ದಾರಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ.) |
|---|---|---|---|
| | 3. ಠೇವಣಿಗಳು ಮತ್ತು ಇತರೆ ಖಾತೆ | | |
| 69,55,39,248.00 | ನಿಶ್ಚಿತ ಠೇವಣಿ - ವ್ಯಕ್ತಿಗಳಿಂದ | 80,38,77,428.00 | |
| 76,90,85,067.00 | ಮರು ಹೂಡಿಕೆ ಠೇವಣಿ | 87,86,89,922.00 | |
| 2,08,44,513.00 | ಆವರ್ತಕ ಠೇವಣಿ | 1,81,55,017.00 | |
| 5,47,992.00 | ಸಿಬ್ಬಂದಿ ಭದ್ರತಾ ಠೇವಣಿ | 5,93,823.00 | |
| 115,87,22,706.01 | ಉಳಿತಾಯ ಠೇವಣಿ | 145,53,46,431.63 | |
| 37,83,46,972.20 | ಚಾಲ್ತಿ ಠೇವಣಿ - ವ್ಯಕ್ತಿಗಳಿಂದ | 11,85,53,901.99 | |
| 8,41,985.37 | ಓ.ಡಿ. ಖಾತೆಯಲ್ಲಿ ಜಮಾ ಶಿಲ್ಕು | 28,41,564.82 | |
| **302,39,28,483.58** | | | **327,80,58,088.44** |
| | 4. ಬರಬೇಕಾಗಿರುವ ಬಿಲ್ಲುಗಳ ಮೊತ್ತ | | |
| -- | ಕ್ಲಿಯರಿಂಗ್‌ಗೆ ಕಳುಹಿಸಿದ ಚೆಕ್ಕುಗಳು (ಕಾಂಟ್ರಾ) | | ---- |
| | 5. ಸುಸ್ತಿ ಬಡ್ಡಿ ಕಾಯ್ದಿರಿಸಿದ್ದು | | |
| | ಅನುತ್ಪಾದಕ ಸಾಲದ ಮೇಲಿನ | | |
| **3,47,224.00** | ಬಡ್ಡಿ ಕಾಯ್ದಿರಿಸಿದ್ದು (ಕಾಂಟ್ರಾ) | | **6,29,161.00** |
| | 6. ಕೊಡಬೇಕಾದ ಬಡ್ಡಿಗಳು | | |
| 38,81,021.00 | ನಿಶ್ಚಿತ ಠೇವಣಿ ಮೇಲಿನ ಬಡ್ಡಿ | 41,27,020.00 | |
| 5,88,103.00 | ಮರು ಹೂಡಿಕೆ ಠೇವಣಿ ಮೇಲಿನ ಬಡ್ಡಿ | 5,13,638.00 | |
| **44,69,124.00** | | | **46,40,658.00** |
| | 7. ಇತರೆ ಜವಾಬ್ದಾರಿಗಳು : | | |
| 13,43,07,774.67 | ಅನುತ್ಪಾದಕ ಸಾಲದ ಮೇಲಿನ ಅವಕಾಶ | 13,43,07,774.67 | |
| 46,97,000.00 | ರಿಸ್ಟ್ರಕ್ಚರ್ ಸಾಲದ ಮೇಲಿನ ಅವಕಾಶ | 46,97,000.00 | |
| 1,35,33,000.00 | ಉತ್ಪಾದಕ ಸಾಲದ ಮೇಲಿನ ಅವಕಾಶ | 1,35,33,000.00 | |
| 1,50,97,120.00 | ಪೇ ಆರ್ಡರ್ (ಬ್ಯಾಂಕರ್ಸ್ ಚೆಕ್ಕುಗಳು) | 1,78,93,298.00 | |
| 3,000.00 | ಪ್ರೊಫೇಷನಲ್ ತೆರಿಗೆ ಪಾವತಿಸಬೇಕಾದದ್ದು | 3,000.00 | |
| 4,00,000.00 | ಹೂಡಿಕೆಗಳ ಮೇಲಿನ ಇಳಿಕೆ ಅವಕಾಶ | 31,00,000.00 | |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ದಿನಾಂಕ 31.03.2026 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ.) | ಆಸ್ತಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ.) |
|---|---|---|---|
| 4,64,96,033.00 | ವಾಹನ ಸಾಲ | 5,35,08,322.00 | |
| 16,69,21,612.00 | ಗೃಹ ಸಾಲ | 20,99,09,594.00 | |
| 1,14,79,245.00 | ಶೈಕ್ಷಣಿಕ ಸಾಲ | 1,60,96,756.00 | |
| 4,67,888.00 | ಸಿಬ್ಬಂದಿ ವಾಹನ ಸಾಲ | 3,38,331.00 | |
| 24,03,861.00 | ಸಿಬ್ಬಂದಿ ಗೃಹ ಸಾಲ | 21,25,000.00 | |
| **117,11,44,946.00** | | | **129,33,41,195.00** |
| | ಬಿ. ಆಧಾರ ರಹಿತ ಸಾಲ | | |
| 75,599.00 | ವೈಯಕ್ತಿಕ ಸಾಲ | 75,599.00 | |
| 21,74,984.00 | ಸಿಬ್ಬಂದಿ ವೈಯಕ್ತಿಕ ಸಾಲ | 21,32,797.00 | |
| **22,50,583.00** | | | **22,08,396.00** |
| | 5. ಬಡ್ಡಿ ಬರಬೇಕಾದದ್ದು | | |
| 3,47,224.00 | ಅನುತ್ಪಾದಕ ಸಾಲದ ಬಡ್ಡಿ ಕಾಯ್ದಿರಿಸಿದ್ದು | 6,29,161.00 | |
| | ಸರ್ಕಾರಿ ಹೂಡಿಕೆಗಳ ಮೇಲೆ | | |
| 2,39,38,572.00 | ಬಡ್ಡಿ ಬರಬೇಕಾದದ್ದು | 3,00,12,820.00 | |
| 21,07,338.00 | ಟ್ರೆಸರಿ ಬಿಲ್ಲಿನ ಮೇಲಿನ ಬಡ್ಡಿ ಬರಬೇಕಾದದ್ದು | 4,56,667.00 | |
| | ಇತರೆ ಬ್ಯಾಂಕುಗಳ ನಿಶ್ಚಿತ ಠೇವಣಿ ಮೇಲಿನ | | |
| 8,00,685.00 | ಬಡ್ಡಿ ಬರಬೇಕಾದದ್ದು | 40,84,970.00 | |
| **2,71,93,819.00** | | | **3,51,83,618.00** |
| | 6. ಸ್ಥಿರಾಸ್ತಿಗಳು - ನಿವೇಶನ | | |
| 4,16,94,220.00 | ಬ್ಯಾಂಕಿಗೆ ನಿವೇಶನ ಖರೀದಿ | 4,22,66,161.00 | |
| 43,40,878.00 | ಬ್ಯಾಂಕಿನ ಕಟ್ಟಡ ನಿರ್ಮಾಣ ಹಂತದಲ್ಲಿನ ವೆಚ್ಚ | 1,81,38,233.00 | |
| **4,60,35,098.00** | | | **6,04,04,394.00** |
| | 7. ಚರಾಸ್ತಿಗಳು | | |
| | ಎ. ಪೀಠೋಪಕರಗಳು | | |
| 25,34,189.00 | 1.4.2025ರಲ್ಲಿ ಇದ್ದಂತೆ | 22,89,974.00 | |
| 10,227.00 | ಖರೀದಿ | 18,57,230.00 | |
| **25,44,416.00** | | **41,47,204.00** | |
| 2,54,442.00 | ಸವಕಳಿ | 3,21,859.00 | |
| **22,89,974.00** | | | **38,25,345.00** |

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ದಿನಾಂಕ 31.03.2026ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ.) | ಜವಾಬ್ದಾರಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ.) |
|---|---|---|---|
| 2,31,750.00 | ಶಾಸನ ಬದ್ಧ ಲೆಕ್ಕ ಪರಿಶೋಧನಾ ಶುಲ್ಕ | 2,35,800.00 | |
| 33,71,082.00 | ಸಿಬ್ಬಂದಿ ಬೋನಸ್ ಮತ್ತು ಪ್ರೋತ್ಸಾಹ ಧನ | 18,16,709.00 | |
| --- | ಸಿಬ್ಬಂದಿ ಗ್ರಾಚ್ಯುಯಿಟಿ ಅವಕಾಶ | 6,26,116.00 | |
| 4,300.00 | ದೂರವಾಣಿ ಬಿಲ್ ಅವಕಾಶ | 4,213.00 | |
| 45,000.00 | ವಿದ್ಯುತ್‌ಚ್ಛಕ್ತಿ ಬಿಲ್ ಅವಕಾಶ | 49,000.00 | |
| 17,61,653.00 | ಆದಾಯ ತೆರಿಗೆ ಪಾವತಿಸಬೇಕಾದದ್ದು | 23,81,930.00 | |
| 1,03,00,566.00 | ಸಿಬ್ಬಂದಿ ರಜಾ ನಗದೀಕರಣದ ಅವಕಾಶ | 1,33,09,711.00 | |
| 45,000.00 | ತೆರಿಗೆ ಲೆಕ್ಕಪರಿಶೋಧನಾ ಶುಲ್ಕ | 45,000.00 | |
| 8,68,607.00 | ಠೇವಣಿ ಬಡ್ಡಿಯ ಮೇಲಿನ ಟಿಡಿಎಸ್ | 9,74,355.00 | |
| 37,969.00 | ಜಿ. ಎಸ್. ಟಿ. ಪಾವತಿಸಬೇಕಾದದ್ದು | 63,588.00 | |
| 6,92,957.00 | ಸದಸ್ಯರ ಡಿವಿಡೆಂಡ್ 2021-22ಕ್ಕೆ | 6,72,684.00 | |
| 7,57,013.00 | ಸದಸ್ಯರ ಡಿವಿಡೆಂಡ್ 2022-23ಕ್ಕೆ | 7,33,853.00 | |
| 7,56,618.00 | ಸದಸ್ಯರ ಡಿವಿಡೆಂಡ್ 2023-24ಕ್ಕೆ | 7,11,255.00 | |
| -- | ಸದಸ್ಯರ ಡಿವಿಡೆಂಡ್ 2024-25ಕ್ಕೆ | 8,57,984.00 | |
| **18,69,10,409.67** | | | **19,60,16,270.67** |
| | 8. ನಿವ್ವಳ ಲಾಭ | | |
| **9,34,82,140.00** | 2025 - 26ನೇ ಸಾಲಿಗೆ | | **8,65,12,918.00** |
| | 9. ಅನಿಶ್ಚಿತ ಹೊಣೆಗಾರಿಕೆಗಳು | | |
| 1,72,50,333.00 | ಅನ್‌ಕ್ಲೈಮಡ್ - ಡಿ.ಇ.ಎ.ಎಫ್ ನಲ್ಲಿ ಇರಿಸಿದ್ದು(ಕಾಂಟ್ರಾ) | 1,76,13,047.00 | |
| 10,000.00 | ಬ್ಯಾಂಕ್ ಗ್ಯಾರಂಟಿ ನೀಡಿರುವುದು | 10,000.00 | |
| **1,72,60,333.00** | | | **1,76,23,047.00** |
| **438,21,53,535.87** | ಜುಮ್ಲಾ | | **472,47,03,847.73** |

- ಸಹಿ -

( ಶಿವಣ್ಣ .ಕೆ. ಬಿ. )

ಮುಖ್ಯ ಕಾರ್ಯನಿರ್ವಹಣಾಧಿಕಾರಿ

- ಸಹಿ -

(ವೆಂಕಟೇಶ್ ಅಯ್ಯರ್. ಪಿ.ವಿ.)

ನಿರ್ದೇಶಕರು

ಸ್ಥಳ : ಬೆಂಗಳೂರು

ದಿನಾಂಕ : 23-06-2026

# ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ದಿನಾಂಕ 31.03.2026 ರಲ್ಲಿದ್ದಂತೆ ಆಸ್ತಿ - ಜವಾಬ್ದಾರಿ ತಃಖ್ತೆ

| 31.03.2025 ರಂದು ಮೊಬಲಗು (ರೂ.) | ಆಸ್ತಿಗಳು | ಮೊಬಲಗು | 31.03.2026ರಂದು ಮೊಬಲಗು (ರೂ.) |
|---:|---|---:|---:|
| | ಬಿ. ಗಣಕಯಂತ್ರ ಮತ್ತು ವಿದ್ಯುತ್ ಸಲಕರಣೆಗಳು | | |
